ಕಾಲೇಜಿನಲ್ಲಿ ದಾಖಲಾದ ಒಟ್ಟು ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಥಿನಿಯರ ಸಂಖ್ಯೆ ಅಧಿಕವಾಗಿದೆ. ವಿದ್ಯಾರ್ಥಿನಿಯರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾಲೇಜಿನಿಂದ ಉಚಿತ ಬಸ್ ವ್ಯವಸ್ಥೆಯು ಕೆ.ಎಸ್.ಆರ್.ಟಿ.ಸಿ. ನಿಲ್ದಾಣ ಮತ್ತು ವಿಸ್ತರಿಸಿದ ಭಾಗಗಳಿಗೆ ಇರುತ್ತದೆ. ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನಾಭಿವೃದ್ಧಿಗೆ ಶೈಕ್ಷಣಿಕ ಪ್ರವಾಸ, ಕೈಗಾರಿಕಾ ಭೇಟಿ ವ್ಯವಸ್ಥೆಯಿರುತ್ತದೆ. ವಿದ್ಯಾರ್ಥಿಗಳ ಓದು-ಬರವಣಿಗೆ ಪರಿಕರಗಳಿಗಾಗಿ ವಿದ್ಯಾರ್ಥಿ ಸಹಕಾರ ಸಂಘದಿಂದ ಕಡಿಮೆ ದರದಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸೃಜನಶೀಲತೆಯ ಬೆಳವಣಿಗೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸಗಳು, ಸ್ಪರ್ಧೆಗಳು, ಹವ್ಯಾಸಿ ನಾಟಕ ತರಬೇತಿ ಸೌಲಭ್ಯಗಳೂ ಇರುತ್ತವೆ. ನಿಯತಕಾಲಿಕ ಪೋಷಕರ ಸಭೆ, ಮೆಂಟರಿಂಗ್ ವ್ಯವಸ್ಥೆ, ದೂರು ಸ್ವೀಕಾರ ಮತ್ತು ಇತ್ಯರ್ಥವ್ಯವಸ್ಥೆ, ಮಹಿಳಾಕೋಶ, ವಿವಿಧ ಸಮಿತಿಗಳ ಸಲಹಾ ವ್ಯವಸ್ಥೆ ಹಾಗೂ ಉದ್ಯೋಗ ಸಂಬಂಧಿ ಮಾಹಿತಿ ವ್ಯವಸ್ಥೆಗಳೂ ಸಹ ಕಾಲೇಜಿನಲ್ಲಿ ಇರುತ್ತವೆ.

## ಶಾಂತಿ ಮಹಾವಿದ್ಯಾಲಯದ ವಿದ್ಯಾರ್ಥಿಯಾಗಿ :

1. ಶಿಕ್ಷಣವು ನಿನ್ನ ಶ್ರಮ, ಶ್ರದ್ಧೆ, ಪ್ರಾಮಾಣಿಕತೆಯನ್ನು ಬಯಸುವ ಒಂದು ಅಪರೂಪದ ಅವಕಾಶವೆಂದು ತಿಳಿಯಬೇಕು.
2. ನಿನ್ನ ಈ ಕಾಲೇಜು ಶಿಕ್ಷಣವು ತಂದೆ-ತಾಯಿಯರ ಶ್ರಮದ ಪ್ರತಿಫಲವೆಂದು ಭಾವಿಸಿ ಇಷ್ಟ ಪಟ್ಟು-ಕಷ್ಟ ಪಟ್ಟು ಚೆನ್ನಾಗಿ ಓದಬೇಕು.
3. ನಿನ್ನ ನಿತ್ಯದ ನಡೆ - ನುಡಿಯಲ್ಲಿ ಈ ಮಹಾವಿದ್ಯಾಲಯದ ಘನತೆ ಗೌರವಗಳನ್ನು ಕಾಪಾಡಿಕೊಂಡು ಬರಬೇಕು.
4. ವಿದ್ಯಾಲಯದ ಒಳಗೆ-ಹೊರಗೆ ನಿನ್ನ ಉತ್ತಮ ನಡತೆ ಮತ್ತು ಆಚರಣೆಗಳಿಂದ ನೀನೊಬ್ಬ ಆದರ್ಶ ವಿದ್ಯಾರ್ಥಿ ಎಂಬುವುದನ್ನು ನಿರೂಪಿಸಬೇಕು.
5. ಸ್ತ್ರೀಯರು ಮತ್ತು ಗುರು-ಹಿರಿಯರ ಬಗ್ಗೆ ಗೌರವ ಮತ್ತು ವಿನಯ ಶೀಲತೆಯಿಂದ ವರ್ತಿಸಬೇಕು.
6. ಈ ಮಹಾವಿದ್ಯಾಲಯದ ಚರ-ಸ್ಥಿರ ಸ್ವತ್ತುಗಳನ್ನು ನಿನ್ನ ಸ್ವಂತದ್ದೆಂದು ತಿಳಿದು ಕಾಪಾಡಬೇಕು.
7. ಕಾಲೇಜಿನ ಆವರಣದ ಸ್ವಚ್ಛತೆಯನ್ನು ಕಾಪಾಡುವುದು ನಿನ್ನ ಆದ್ಯ ಕರ್ತವ್ಯ.




**ಡಾ. ಸಿ. ನಾಗರಾಜು** ಎಂ.ಕಾಂ., ಪಿ.ಎಚ್.ಡಿ.

ಪ್ರಾಂಶುಪಾಲರು, ಪದವಿ ಕಾಲೇಜು

ದೂರವಾಣಿ : 08231-242029































# ಶಾಂತಿ ಶಿಕ್ಷಣ ಸಂಸ್ಥೆ (ರಿ.)

**ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

ಮಳವಳ್ಳಿ - 571 430, ಮಂಡ್ಯ ಜಿಲ್ಲೆ.

ನ್ಯಾಕ್ ಸಮಿತಿಯಿಂದ $B^{++}$ ಗ್ರೇಡ್ ಮಾನ್ಯತೆಯನ್ನು ಪಡೆದಿದೆ

## Vision, Mission, Goals & Objectives of the Institution

### Vision

"Providing Quality Education to Rural Students,
Empowering them through knowledge,
Making them aware of Socio-Economic changes and
Sustainable Development"

### Mission

"Moulding students into rational thinkers,
competent workers and citizens of social awareness"

## ಮಾರ್ಗದರ್ಶಿ



# Shanthi Arts, Science & Commerce College


Malavalli- 571 430, Mandya District
Phone : 08231-242029, 242268
email : shanthifirstgradecollege@yahoo.com
Web : shanthicollege.edu.in

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಾಂತಿ ಕಾಲೇಜು 1970 ರಲ್ಲಿ ದಿವಂಗತ ಕೆ.ಎನ್. ನಾಗೇಗೌಡರು ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರಿಂದ ಸ್ಥಾಪನೆಗೊಂಡು ಕಳೆದ 52 ವರ್ಷಗಳಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ "ಜ್ಞಾನ ದಾಸೋಹ"ವನ್ನು ನಡೆಸುತ್ತಾ ಬಂದಿದೆ. ಈ ಕಾಲೇಜು ಮಳವಳ್ಳಿ ಪಟ್ಟಣದ ಹೊರ ವಲಯದಲ್ಲಿ ಸುಂದರ ಪ್ರಕೃತಿ ವಾತಾವರಣದಲ್ಲಿ ನೆಲೆಗೊಂಡಿದೆ. ಪ್ರಸ್ತುತ ಈ ಕಾಲೇಜು ಕರ್ನಾಟಕ ಸರ್ಕಾರದ ಮಾಜಿ ಶಾಸಕರಾದ ಶ್ರೀಮತಿ ಎಂ.ಕೆ. ನಾಗಮಣಿ ನಾಗೇಗೌಡರ ದಕ್ಷ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಸಮರ್ಥ ಆಡಳಿತ ಮಂಡಳಿ ಮತ್ತು ಉತ್ತಮ ಸೇವಾನುಭವ ಉಳ್ಳ ಅಧ್ಯಾಪಕ ವೃಂದದ ಕೈಂಕರ್ಯದಲ್ಲಿ ಕಾಲೇಜು ವಿಕಾಸ ಪಥದಲ್ಲಿ ಸಾಗುತ್ತಿದೆ. ಈ ಕಾಲೇಜು ಸರ್ವತೋಮುಖವಾದ ಮೂಲ ಸೌಕರ್ಯಗಳನ್ನು ಹೊಂದಿದ್ದು, 'ರಾಷ್ಟ್ರೀಯ ಮಟ್ಟದ ಕಾಲೇಜುಗಳ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆ (ನ್ಯಾಕ್) ಕಾಲೇಜಿಗೆ 'ಬಿ++' ಮನ್ನಣೆ ನೀಡಿದೆ. ಕಾಲೇಜಿನಲ್ಲಿ ಪಾಠ ಪ್ರವಚನಗಳು ಪರಿಣಾಮಕಾರಿಯಾಗಿ ನಡೆಯುತ್ತಾ ಬಂದಿವೆ. ಪ್ರತಿ ವರ್ಷ ಕಾಲೇಜಿಗೆ ಅತ್ಯುತ್ತಮ ಫಲಿತಾಂಶ ಬರುತ್ತಿದೆ. ಪಠ್ಯೇತರ ಚಟುವಟಿಕೆಗಳಲ್ಲೂ ನಮ್ಮ ಕಾಲೇಜು ಮುಂದಿದ್ದು ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಯ ವಿಕಸನಕ್ಕೂ ಅವಕಾಶ ಮಾಡಿಕೊಡಲಾಗುತ್ತಿದೆ. ನಮ್ಮ ಕಾಲೇಜಿನಲ್ಲಿ ಉದ್ಯೋಗ ಮಾಹಿತಿ ಕೇಂದ್ರ, ಮಹಿಳಾ ವಿಶ್ರಾಂತಿ ಕೊಠಡಿ, ಪ್ರಥಮ ಚಿಕಿತ್ಸಾ ಕೇಂದ್ರ, ಉಪಹಾರ ಮಂದಿರ, ವಿಶಾಲವಾದ ಆಡಿಟೋರಿಯಂ, ಉತ್ತಮ ಪ್ರಯೋಗಾಲಯಗಳು, ಗ್ರಂಥಾಲಯ ಮತ್ತು ಕ್ರೀಡಾವ್ಯವಸ್ಥೆಗಳಿವೆ.

## ಅಧ್ಯಯನ ವಿಷಯಗಳು :

**A) ಬಿ.ಎ. :**

**ಭಾಷಾ ವಿಷಯಗಳು :** ಕನ್ನಡ ಮತ್ತು ಇಂಗ್ಲೀಷ್/ಹಿಂದಿ/ಸಂಸ್ಕೃತ

**ಐಚ್ಛಿಕ ವಿಷಯಗಳು:**

1) ಇತಿಹಾಸ, ಅರ್ಥಶಾಸ್ತ್ರ (ಹೆಚ್.ಇ.)
2) ರಾಜ್ಯಶಾಸ್ತ್ರ, ಸಮಾಜಶಾಸ್ತ್ರ (ಪಿ.ಎಸ್)
3) ಅರ್ಥಶಾಸ್ತ್ರ, ಐಚ್ಛಿಕ ಕನ್ನಡ (ಇ.ಕೆ.)

**ಮುಕ್ತ ಆಯ್ಕೆಗಳು:**

1) ಪರಿಸರ ಅಧ್ಯಯನ 2) ಡಿಜಿಟಲ್ ಫ್ಲೂಯನ್ಸಿ

**B) ಬಿ.ಎಸ್ಸಿ :**

**ಭಾಷಾ ವಿಷಯಗಳು:** ಕನ್ನಡ ಮತ್ತು ಇಂಗ್ಲೀಷ್/ಹಿಂದಿ/ಸಂಸ್ಕೃತ

**ಐಚ್ಛಿಕ ವಿಷಯಗಳು:**

1) ಭೌತಶಾಸ್ತ್ರ, ರಸಾಯನಶಾಸ್ತ್ರ (ಪಿ.ಸಿ.)
2) ರಸಾಯನಶಾಸ್ತ್ರ, ಗಣಿತ ಶಾಸ್ತ್ರ (ಸಿ.ಎಂ.)

**ಮುಕ್ತ ಆಯ್ಕೆಗಳು:**

1) ಪರಿಸರ ಅಧ್ಯಯನ 2) ಡಿಜಿಟಲ್ ಫ್ಲೂಯನ್ಸಿ

**C) ಬಿ.ಕಾಂ.:**

**ಭಾಷಾ ವಿಷಯಗಳು:** ಕನ್ನಡ ಮತ್ತು ಇಂಗ್ಲೀಷ್/ಹಿಂದಿ/ಸಂಸ್ಕೃತ

**ಐಚ್ಛಿಕ ವಿಷಯಗಳು :**

(ಮೈಸೂರು ವಿಶ್ವವಿದ್ಯಾನಿಲಯದ ನಿಯಾಮವಳಿಗಳ ಪ್ರಕಾರ ಇರುವ ಕಡ್ಡಾಯ ವಿಷಯಗಳು)

**D) ಬಿ.ಬಿ.ಎ.:**

**ಭಾಷಾ ವಿಷಯಗಳು :** ಕನ್ನಡ ಮತ್ತು ಇಂಗ್ಲೀಷ್/ಹಿಂದಿ/ಸಂಸ್ಕೃತ

(ಮೈಸೂರು ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಇರುವ ಕಡ್ಡಾಯ ವಿಷಯಗಳು)

## ಪ್ರವೇಶ ನಿಯಮಗಳು :

1) ಪಿ.ಯು.ಸಿ., ತತ್ಸಮಾನ ವಿದ್ಯಾರ್ಹತೆ ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರು
2) ಕಾಲೇಜು ನೀಡುವ ಪ್ರವೇಶವು ತಾತ್ಕಾಲಿಕವಾಗಿದ್ದು ವಿಶ್ವ ವಿದ್ಯಾನಿಲಯ ಅಂಗೀಕಾರವನ್ನು ಅವಲಂಬಿಸಿರುತ್ತದೆ.
3) ಯಾವುದೇ ವಿದ್ಯಾರ್ಥಿಯು ನಕಲಿ ಪ್ರಮಾಣ ಪತ್ರ ಅಥವಾ ತಪ್ಪು ಮಾಹಿತಿಯ ಮೇಲೆ ಪ್ರವೇಶ ಪಡೆದಿರುವುದು ತಿಳಿದು ಬಂದರೆ ಅಂಥ ಪ್ರವೇಶವನ್ನು ರದ್ದುಗೊಳಿಸಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4) ಪ್ರವೇಶ ಪಡೆದ ವಿದ್ಯಾರ್ಥಿ ಕಾಲೇಜಿನ ಕಛೇರಿಯಲ್ಲಿ ಗುರುತು ಪತ್ರವನ್ನು ಪಡೆದು ತನ್ನ ಬಳಿಯಲ್ಲಿ ಅದನ್ನು ಇಟ್ಟುಕೊಂಡಿರ ಬೇಕಾಗುತ್ತದೆ.
5) ಪ್ರವೇಶ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ https://uucms.karnataka.gov.in/login/index ನಲ್ಲಿ ಅರ್ಜಿಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಾಲೇಜಿನ ವೆಬ್‌ಸೈಟ್ www.shanthicollege.edu.in ಸಂಪರ್ಕಿಸಿ
6) **ಪ್ರವೇಶ ಪಡೆಯಲು ವಿದ್ಯಾರ್ಥಿ ಸಲ್ಲಿಸಬೇಕಾದ ದಾಖಲೆಗಳು :**
   1. **ವರ್ಗಾವಣೆ ಪತ್ರದ ಮೂಲ ಪ್ರತಿ ಮತ್ತು ಅದರ ನಕಲು ಪ್ರತಿ**
   2. **ಪಿ.ಯು.ಸಿ. ಅಂಕಪಟ್ಟಿ ಮತ್ತು ಎರಡು ನಕಲು ಪ್ರತಿಗಳು**
   3. **ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಒಂದು ನಕಲು ಪ್ರತಿಗಳು**
   4. **ನಡತೆ ಪ್ರಮಾಣ ಪತ್ರ**
   5. **ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 3 ಭಾವಚಿತ್ರ**
   6. **ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ**
   7. **ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿ**

## ಕಾಲೇಜನ ಸಾಮಾನ್ಯ ಶಿಸ್ತು :

ತರಗತಿಗಳು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ನಡೆಯುತ್ತವೆ. ತರಗತಿ ನಡೆಯುವ ವೇಳೆಯಲ್ಲಿ ವಿದ್ಯಾರ್ಥಿಗಳು ಒಳ ಆವರಣದಲ್ಲಿ ಅಡ್ಡಾಡುವುದು, ನಿಲ್ಲುವುದು ಮಾಡಬಾರದು. ಕಾಲೇಜಿನ ಗೋಡೆ ಹಾಗೂ ಪೀಠೋಪಕರಣಗಳ ಮೇಲೆ ಬರೆಯಬಾರದು. ವಿದ್ಯಾರ್ಥಿಗಳಿಗೆ ಸಂಬಂಧಪಡದವರಿಗೆ ಕಾಲೇಜಿಗೆ ಪ್ರವೇಶವಿರುವುದಿಲ್ಲ. ಪ್ರತೀ ವಿಷಯಕ್ಕೆ ಶೇ.75 ರಷ್ಟು ಹಾಜರಾತಿ ಕಡ್ಡಾಯ. ಹಾಜರಾತಿ ಇಲ್ಲದ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಲು ಅವಕಾಶ ಇರುವುದಿಲ್ಲ. ತರಗತಿ ಮತ್ತು ಕಾಲೇಜಿನ ಆವರಣದಲ್ಲಿ ಅಸಭ್ಯವಾಗಿ ನಡೆದುಕೊಳ್ಳುವ ವಿದ್ಯಾರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.

ವಿವಿಧ ವರ್ಗದ ವಿದ್ಯಾರ್ಥಿಗಳಿಗೆ, ವಿವಿಧ ರೀತಿಯ ವಿದ್ಯಾರ್ಥಿ ವೇತನ ಸೌಲಭ್ಯವಿದೆ. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವವರು ನಿಗದಿತ ಅರ್ಜಿ ನಮೂನೆಗಳನ್ನು ಕಛೇರಿಯಿಂದ ಪಡೆದು ಎಸ್‌ಎಸ್‌ಪಿ ಪೋರ್ಟಲ್ ಮೂಲಕ ಸಲ್ಲಿಸುವುದು.

## ವಿವಿಧ ಬಗೆಯ ವಿದ್ಯಾರ್ಥಿ ವೇತನಗಳು ಹೀಗಿವೆ :

1. **ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ಭಾರತ ಸರ್ಕಾರದ – ವಿದ್ಯಾರ್ಥಿ ವೇತನ**
2. **ಅಂಗವಿಕಲ ವಿದ್ಯಾರ್ಥಿ ವೇತನ**
3. **ಮಾಜಿ ಸೈನಿಕ ಮಕ್ಕಳ ವಿದ್ಯಾರ್ಥಿ ವೇತನ**
4. **ಸ್ವಾತಂತ್ರ ಹೋರಾಟಗಾರರ ಮಕ್ಕಳ ವಿದ್ಯಾರ್ಥಿವೇತನ**
5. **ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ**
6. **ಕಾರ್ಮಿಕ ಕಲ್ಯಾಣ ಮಂಡಲಿ ವಿದ್ಯಾರ್ಥಿ ವೇತನ**
7. **ರಾಷ್ಟ್ರೀಯ ಗ್ರಾಮಾಂತರ ಪ್ರತಿಭಾವಂತ ವಿದ್ಯಾರ್ಥಿ ವೇತನ**
8. **ಸಂಚಿ ಹೊನ್ನಮ್ಮ ಬಡವರ ಕಲ್ಯಾಣನಿಧಿ ವಿದ್ಯಾರ್ಥಿ ವೇತನ**
9. **ಯು.ಜಿ.ಸಿ. ಮೆರಿಟ್ ಸ್ಕಾಲರ್‌ಶಿಪ್**
10. **ಬೀಡಿ ಕಾರ್ಮಿಕರ ವಿದ್ಯಾರ್ಥಿವೇತನ**

## ಗ್ರಂಥಾಲಯ :

ನಮ್ಮಲ್ಲಿ ಅತ್ಯುತ್ತಮವಾದ ಗ್ರಂಥಾಲಯ ಸೌಲಭ್ಯವಿದ್ದು ಸದಸ್ಯತ್ವ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ಕುಳಿತು ಓದುವ ಸೌಕರ್ಯವಿರುವುದಲ್ಲದೆ 2 ಪುಸ್ತಕಗಳನ್ನು ಏಕಕಾಲಕ್ಕೆ ಎರವಲು ಪಡೆಯಬಹುದು. ಗ್ರಂಥಾಲಯಕ್ಕೆ ಹೊಂದಿಕೊಂಡಂತಿರುವ ವಾಚನಾಲಯದ ಪ್ರಯೋಜನವನ್ನು ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು. ವಿದ್ಯುನ್ಮಾನ ಗ್ರಂಥಾಲಯದ ಸೌಲಭ್ಯವಿದೆ.

## ಪ್ರಯೋಗಶಾಲೆ :

ಕಾಲೇಜು ಬಿ.ಎಸ್ಸಿ. ತರಗತಿಗಳಿಗೆ ಯೋಗ್ಯವಾದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಪ್ರಯೋಗ ಶಾಲೆಗಳನ್ನು ಹೊಂದಿದೆ. ಈ ಪ್ರಯೋಗ ಶಾಲೆಗಳು ಸರ್ವತೋಮುಖವಾಗಿ ಸಜ್ಜಾಗಿದ್ದು, ಕಾಲೇಜಿನ ಮುಂಭಾಗದ ಮೊದಲ ಅಂತಸ್ತಿನಲ್ಲಿ ಸ್ಥಾಪಿತವಾಗಿವೆ. ಇದರ ಜೊತೆಗೆ ಸುಸಜ್ಜಿತವಾದ ಕಂಪ್ಯೂಟರ್ ಕೇಂದ್ರ ವಿದ್ದು ವಿದ್ಯಾರ್ಥಿಗಳ ಇ–ಕಲಿಕೆಗೆ ಸಹಾಯ ಮಾಡುತ್ತಿದೆ. ಕಾಲೇಜು ಉತ್ತಮವಾದ ಎನ್.ಸಿ.ಸಿ. ಪಡೆಯನ್ನು ಹೊಂದಿದ್ದು, ಇದರಲ್ಲಿ ಪುರುಷ ಮತ್ತು ಮಹಿಳಾ ಘಟಕಗಳಿವೆ. ಎನ್.ಸಿ.ಸಿ. ಯಲ್ಲಿ ನಮ್ಮ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಉತ್ತಮ ಕೆಡೆಟ್‌ಗಳನ್ನು ಹೊಂದಿರುವ ಕಾಲೇಜು ಎಂಬ ಪ್ರಶಸ್ತಿ ಪಡೆದಿರುತ್ತದೆ. ನಮ್ಮಲ್ಲಿ ಸೇವಾ ಭಾವನೆಯನ್ನು ಹೊಂದಿರುವ ವಿದ್ಯಾರ್ಥಿಗಳಿದ್ದು ರಾಷ್ಟ್ರೀಯ ಸೇವಾ ಯೋಜನೆಯ 2 ಘಟಕಗಳಿವೆ. ಇವು ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿವೆ. ನಮ್ಮಲ್ಲಿ ವಿಶಾಲವಾದ ಆಟದ ಮೈದಾನವಿದ್ದು ಉತ್ತಮ ದೈಹಿಕ ಶಿಕ್ಷಣ ವಿಭಾಗವಿದೆ, ಸಾಂಸ್ಕೃತಿಕ ಸಮಿತಿ, ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್‌ಕ್ರಾಸ್ ವಿಭಾಗಳಿವೆ.